Teachingninja.in

Latest Govt Job updates

Private Job updates

Free Mock tests available

Visit - teachingninja.in

# Karnataka High Court Civil Judge

## Previous Year Paper
### Mains Translation Paper
### (Held On 28 Nov 2020)

Teachingninja.in

# HIGH COURT OF KARNATAKA

## ಕರ್ನಾಟಕ ಉಚ್ಚ ನ್ಯಾಯಾಲಯ

## CIVIL JUDGE MAIN WRITTEN EXAMINATION 2020

## ಸಿವಿಲ್ ನ್ಯಾಯಾಧೀಶರ ಮುಖ್ಯ ಲಿಖಿತ ಪರೀಕ್ಷೆ 2020

## TRANSLATION PAPER

## ಭಾಷಾಂತರ ಪತ್ರಿಕೆ

Date: 28.11.2020
ದಿನಾಂಕ: 28ನೇ ನವೆಂಬರ್ 2020

Max Marks: 100
ಗರಿಷ್ಠ ಅಂಕಗಳು : 100

Time: 10.00 AM to 1.00 PM
ಸಮಯ: ಬೆಳಿಗ್ಗೆ 10.00 ರಿಂದ ಮಧ್ಯಾಹ್ನ 1.00 ಗಂಟೆ

**Instructions:**
ಸೂಚನೆಗಳು:

Write your register number only on the cover page in the space provided in the answer book and nowhere else. You shall not write your name or make any kind of marks disclosing your identity on any part of your answer book or additional answer book. Contravention of the above instruction will entail disqualification.

ನಿಮ್ಮ ರಿಜಿಸ್ಟರ್ ನಂಬರನ್ನು ಉತ್ತರ ಪತ್ರಿಕೆಯ ಕವರ್ ಪುಟದಲ್ಲಿ ಒದಗಿಸಿದ ಜಾಗದಲ್ಲಿ ಮಾತ್ರ ಬರೆಯಬೇಕು, ಬೇರೆ ಎಲ್ಲಿಯೂ ಬರೆಯಬಾರದು. ನಿಮ್ಮ ಗುರುತನ್ನು ಬಹಿರಂಗಪಡಿಸುವಂತೆ ಉತ್ತರ ಪತ್ರಿಕೆಯಲ್ಲಾಗಲಿ ಅಥವಾ ಹೆಚ್ಚುವರಿ ಉತ್ತರ ಪತ್ರಿಕೆಯಲ್ಲಾಗಲಿ ನಿಮ್ಮ ಹೆಸರನ್ನು ಬರೆಯಬಾರದು ಅಥವಾ ಯಾವುದೇ ಗುರುತನ್ನು ಮಾಡಬಾರದು. ಈ ಮೇಲಿನ ಸೂಚನೆ ಉಲ್ಲಂಘಿಸಿದರೆ ನೀವು ಅನರ್ಹತೆಗೆ ಗುರಿಯಾಗುತ್ತೀರಿ.

1. **Translate the following deposition to Kannada language :**

ಈ ಕೆಳಕಂಡ ಸಾಕ್ಷಿ ಹೇಳಿಕೆಯನ್ನು ಕನ್ನಡ ಭಾಷೆಗೆ ಅನುವಾದಿಸಿ:

**Marks: 15**
ಅಂಕಗಳು: 15

Duly sworn on 22-1-2016.

**Cross-examination by Sri HSM, Counsel for the defendant:**

Plaintiff is a partnership firm. This firm was registered during the year 1997. Myself and my three sons are the partners of said firm. I am representing the partnership firm as its managing

Teachingninja.in

partner. I got documents to prove the same. I have not produced those documents before this court. It is false to suggest that there is no document to show that I am authorized to represent the plaintiff firm.

The plaintiff firm was established with the object of running a restaurant and banquet hall. We are not running business at any other place under the plaintiff firm, apart from at M.G.Road. We got other business abroad. We have our business at Srilanka. At present we are running Canopy Restaurant at Utility building, M.G.Road. We occupy the space of about 22,000 square feet, including fire escape for the building. We are paying rent of Rs.16,000/- to the defendant. We are paying the rent at the rate of about 80 paise per square feet. When it was suggested to the witness that our lease was not extended after 2003, witness said that they have given representation for extension of lease. When it was suggested to the witness that defendants have passed a resolution directing me to pay the lease amount at the rate of Rs.10/- per square feet for building and Rs.5/- per square feet for party hall and Rs.2/- per square feet for open space, witness said that said resolution was not communicated to him. I am not aware about the defendant passing the said resolution. When it was suggested to the witness that he has filed the petition to challenge said resolution, witness said that it was filed in respect of property at basement. I say that basement is not the part of suit property in this suit. It is false to suggest that as per the resolution passed by the defendant, we are liable to pay lease amount of Rs.2,00,00,000/- to the defendants. I have received the notice from

Teachingninja.in

the defendants to pay the amount at enhanced rate for 2 years. We have not paid the amount as demanded in the notice.

(At this stage, further cross examination is deferred at the request of counsel for defendant)

(Typed to my dictation in the Open Court, as the deposition is proceeded with).

R.I.O & A.C.,

Sd/-
XVI Addl. City Civil & Sessions
Judge, Bangalore City.

**2. Translate the following document to Kannada language**

ಈ ಕೆಳಕಂಡ ದಸ್ತಾವೇಜನ್ನು ಕನ್ನಡ ಭಾಷೆಗೆ ಅನುವಾದಿಸಿ:

**Marks: 20**
ಅಂಕಗಳು: 20

**DEED OF SALE OF AGRICULTURAL IMMOVEABLE PROPERTY**

This DEED OF SALE is executed on this the 7th day of July 2018 by:

Mr. Lawrence J Saldanha,
Aged about 58 years,
S/o John Saldanha,
R/at No.203, 2nd floor,
Garuda Apartment,
Kadri Hills, Mangaluru.
Represented by his
General Power of Attorney holder:
Mr. John Mathias
Aged about 42 years,
S/o Francis Mathias,
R/at Mathias House,
Vamanjur, Mangaluru Taluk,
Dakshina Kannada District.

(herein after called the 'VENDOR')

Teachingninja.in

IN FAVOUR OF

Mrs. Latha Poojary,
Aged about 37 years,
W/o Sudhir Poojary,
R/at Poojary Nivas,
2nd cross, Gurupura,
Mangaluru Taluk,
Dakshina Kannada District.

(herein after called the 'PURCHASER')

WHEREAS the immoveable property more fully described in the schedule herein below was purchased by the Vendor from Mr. Stephan Robert D' Souza as per the Sale Deed dated 18.04.2013, registered in the office of the Sub-Registrar, Mangalore. Thus the Vendor has became absolute owner in possession of schedule property and enjoying the said property by changing record of rights, Khatha and other revenue records in his name, with full right, title and interest and absolute power of disposition.

AND WHEREAS the Vendor has decided to sell the schedule property for his personal reasons and has approached the Vendor to sell the schedule property to him and after mutual discussions the vendor has agreed to sell and the purchaser has agreed to purchase the schedule property for its highest market price of Rs.20,00,000/- (Rupees Twenty Lakhs Only) and in continuation thereof this Deed of Sale is executed as follows:

AND WHEREAS the various terms and conditions in this regard have been mutually discussed and are agreed to between the 'VENDOR' and 'PURCHASER' as set out herein below.

1. The total sale consideration agreed by the Vendor and Purchaser for sale of schedule property is at Rs.20,00,000/-

Teachingninja.in

(Rupees Twenty Lakh Only). The purchaser has already paid a sum of Rs. 20,00,000/- (Rupees Twenty Lakh Only) towards payment of above said sale consideration by way of cheque dated 06.07.2018 bearing No.740538 drawn on Vijaya Bank, Panambur Branch, Mangaluru, to the Vendor. The Vendor hereby acknowledges receipt of entire sale consideration.

2. That the Vendor hereby covenants with the Purchaser that he is now lawfully seized and possessed of the schedule property, sold hereunder, without any defects in title whatsoever and the Vendor has got full power of disposition and absolute authority to sell the schedule property in the manner contained herein.

3. The Vendor has assured the Purchaser that the schedule property sold hereunder is free from all encumbrances, charges or equities or court orders, injunctions, mortgages including mortgage by deposit of title deed whatsoever.

4. The Vendor has put the Purchaser in actual, exclusive, physical possession of the schedule property this day itself.

**DESCRIPTION OF THE PROPERTY**
**'SCHEDULE'**

Immoveable property bearing Survey No.254/11, measuring 1 acre 15 cents, situated in **NEERMARGA VILLAGE** of Mangalore Taluk, Dakshina Kannada District, within the Mangalore Registration Sub District:

The above property with House bearing Neermarga Grama Panchayath Door No.7/9 measuring 65.03 sq. meter with well, rights of way, water, customary and easement rights, mamool

Teachingninja.in

rights, right to use the road to the above property and all other appurtenances relating thereto.

IN WITNESS WHEREOF the 'VENDOR' has set his hand to this Deed to Sale on this the 7th day of July 2018 at Mangalore.

**WITNESSES:** **VENDOR**

1.

2.

**3. Translate the following Passage as extracted from a Judgment to Kannada language:** **Marks: 15**

ಈ ಕೆಳಕಂಡ ತೀರ್ಪಿನ ಭಾಗವನ್ನು ಕನ್ನಡ ಭಾಷೆಗೆ ಅನುವಾದಿಸಿ. **ಅಂಕಗಳು: 15**

37. The prosecution has relied upon three circumstances to prove the offence against the accused, namely (i) presence of the accused at the police station; (ii) accused failing to explain the injuries sustained by deceased Ms. Rizwana; and (iii) the deceased and the accused were residing in the same premises at the time of the incident. When prosecution bases its case on circumstantial evidence, the circumstances from which an inference of guilt is sought to be drawn, are to be cogently and firmly established. The Hon'ble Apex Court in the case of ***Rukia Begum vs. State of Karnataka,*** reported in ***(2011) 4 SCC 779*** has held to the following effect:

> *"16. No doubt it is true that for bringing home the guilt on the basis of the circumstantial evidence the prosecution has to establish that the circumstances proved lead to one and the only conclusion towards the guilt of the*

Teachingninja.in

> *accused. In a case based on circumstantial evidence the circumstances from which an inference of guilt is sought to be drawn are to be cogently and firmly established. The circumstances so proved must unerringly point towards the guilt of the accused. It should form a chain so complete that there is no escape from the conclusion that the crime was committed by the accused and none else. It has to be considered within all human probability and not in fanciful manner.*
>
> *17. In order to sustain conviction, circumstantial evidence must be complete and incapable of explanation of any other hypothesis than that of the guilt of the accused. Such evidence should not only be consistent with the guilt of the accused but inconsistent with his innocence. No hard-and-fast rule can be laid to say that particular circumstances are conclusive to establish guilt. It is basically a question of appreciation of evidence which exercise is to be done in the facts and circumstances of each case."*

38. It is not in dispute that there are no eye-witness to the incident. The spot panchanama Ex.P-15 when perused would disclose that incident took place at 8.00 a.m. near the gate in an open space and the said gate was accessible to enter the house of the complainant and it is visible to the road where public have

Teachingninja.in

access. As such it was not incumbent upon the accused to explain the injuries sustained by Ms.Rizwana, particularly when prosecution has not contended that death of Ms.Rizwana had taken place inside the house.

**4. <u>Translate the following deposition to English language</u> :**
**Marks:15**

<u>ಈ ಕೆಳಕಂಡ ಸಾಕ್ಷಿ ಹೇಳಿಕೆಯನ್ನು ಆಂಗ್ಲ ಭಾಷೆಗೆ ಅನುವಾದಿಸಿ.</u> ಅಂಕಗಳು: 15

<u>ಮುಖ್ಯ ವಿಚಾರಣೆ: ವಿಶೇಷ ಸರ್ಕಾರಿ ಅಭಿಯೋಜಕರಿಂದ</u>

ಚಾಸ–1 ನನ್ನ ತಂದೆ. ಚಾಸ–9 ನನ್ನ ತಂಗಿ ಮತ್ತು ಚಾಸ–10 ನನ್ನ ತಾಯಿ. ನನಗೆ ಆರೋಪಿ ಗೊತ್ತು. ಆತನ ಮನೆ ನಮ್ಮ ಮನೆಯ ಪಕ್ಕದಲ್ಲಿಯೇ ಇದೆ. ನನ್ನ ಜನನ ದಿನಾಂಕ: 11.06.2000. ನಾನು ನಮ್ಮ ಊರಿನ ಕನ್ನಡ ಶಾಲೆಯಲ್ಲಿ 8ನೇ ತರಗತಿಯ ವರೆಗೆ ಓದಿದ್ದೇನೆ. ಈಗ್ಗೆ 2 ವರ್ಷಗಳ ಹಿಂದೆ ನನ್ನ 8ನೇ ತರಗತಿ ವಿದ್ಯಾಭ್ಯಾಸ ಮುಗಿದ ನಂತರ ನಾನು ಶಾಲೆಗೆ ಹೋಗಿಲ್ಲ ಮತ್ತು ಮನೆಯಲ್ಲಿಯೇ ಇರುತ್ತೇನೆ.

ಆರೋಪಿಯ ಮನೆ ನಮ್ಮ ಮನೆಯ ಪಕ್ಕದಲ್ಲಿ ಇದ್ದು ಈ ಪ್ರಕರಣ ದಾಖಲಾಗುವ ಸುಮಾರು 5–6 ತಿಂಗಳ ಹಿಂದಿನಿಂದ ಆರೋಪಿಯು ನನ್ನೊಂದಿಗೆ ಮಾತನಾಡಲು ಪ್ರಯತ್ನ ಪಡುತ್ತಿದ್ದ ಮತ್ತು ನನಗೆ ಕೈ ಸನ್ನೆ ಮಾಡುತ್ತಿದ್ದ. ನನ್ನ ತಂದೆ ತಾಯಿ ಈ ಬಗ್ಗೆ ಆರೋಪಿಗೆ ಎಚ್ಚರ ಕೊಟ್ಟಿದ್ದರು ಮತ್ತು ನನಗೆ ಕೂಡ ಆತನೊಂದಿಗೆ ಮಾತನಾಡಬಾರದು ಎಂದು ಹೇಳಿದ್ದರು. ದಿ:11.04.2016ರಂದು ನನ್ನ ತಂದೆ ತಾಯಿ ಕುರಿ ಕಾಯಲು ಹೋಗಿದ್ದರು. ನಾನು ಮತ್ತು ನನ್ನ ತಂಗಿ ಚಾಸ–9 ಮನೆಯಲ್ಲಿ ಇದ್ದು ನನ್ನ ತಂದೆ ನಮಗೆ ಬಾಗಿಲು ಹಾಕಿ ಮಲಗಿಕೊಳ್ಳಿ ಎಂದು ಹೇಳಿ, ರಾತ್ರಿ 10.00 ಗಂಟೆ ಸುಮಾರಿಗೆ ಕುರಿ ಕಾಯಲು ಹೋದರು. ರಾತ್ರಿ 11.00 ಗಂಟೆ ಸುಮಾರಿಗೆ ನಾನು ಮತ್ತು ನನ್ನ ತಂಗಿ ಮಲಗಿದ್ದಾಗ ಯಾರೊ ಬಾಗಿಲು ಬಡಿದ ಶಬ್ದ ಕೇಳಿತು. ನಾನು ನನ್ನ ತಂಗಿ ಹೋಗಿ ಬಾಗಿಲು ತೆಗೆದಾಗ ಆರೋಪಿಯು ನಮ್ಮ ಮನೆಯ ಬಾಗಿಲಲ್ಲಿ ನಿಂತಿದ್ದನು. ನಾನು ಆರೋಪಿಯ ಬಳಿ ಯಾಕೆ ನಮ್ಮ ಮನೆಯ ಬಳಿ ಬಂದಿ ಎಂದು ಕೇಳಿದಾಗ ಆರೋಪಿಯು ನನ್ನ ಕೈ ಹಿಡಿದು ಎಳೆದನು ಆಗ ನಾನು ಮತ್ತು ಚಾಸ–9 ಚಿರಾಡಲು ಹತ್ತಿದೆವು. ಆಗ ಆರೋಪಿಯು ನನ್ನ

Teachingninja.in

ತಂಗಿಯನ್ನು ಮನೆಯ ಒಳಗಡೆ ದೂಡಿ ಮನೆಗೆ ಚಿಳಕ ಹಾಕಿ ನನ್ನನ್ನು ಆತನ ಮನೆಗೆ ಎಳೆದುಕೊಂಡು ತಂದನು. ಅರೋಪಿಯು ನನ್ನನ್ನು ಆತನ ಮನೆಯ ಅಡುಗೆ ಕೋಣೆಗೆ ಕೆರೆದುಕೊಂಡು ಹೋಗಿ ನನ್ನೊಂದಿಗೆ ದೈಹಿಕ ಸಂಪರ್ಕ ಮಾಡಿದನು. ಅದೇ ರಾತ್ರಿ ಆರೋಪಿಯು ಈ ವಿಚಾರ ನನ್ನ ತಂಗಿಗೆ ತಿಳಿದಿದೆ ಮತ್ತು ಆಕೆ ಬೇರೆಯವರಿಗೆ ಹೇಳಬಹುದು ಎಂದು ಹೇಳಿ ನನ್ನನ್ನು ಆತ ಚಲಾಯಿಸುವ ಒಂದು ಎಣ್ಣೆ ಟ್ಯಾಂಕರನಲ್ಲಿ ಲೋಕಾಪುರದ ಮೂಲಕ ಬಾಗಲಕೋಟೆಗೆ ಕರೆದುಕೊಂಡು ಹೋದನು. ಆರೋಪಿಯು ಆ ಎಣ್ಣೆ ಟ್ಯಾಂಕರನ್ನು ಬಾಗಲಕೋಟೆಯಲ್ಲಿ ಇಟ್ಟು ನನ್ನನ್ನು ಚಿಂಚನೂರಿನಲ್ಲಿರುವ ಆತನ ಸಂಬಂಧಿಕರ ಮನೆಗೆ ಕರೆದುಕೊಂಡು ಹೋದನು. ದಿನಾಂಕ:14.04.2016 ರಂದು ನಾವು ಚಿಂಚನೂರಿನಲ್ಲಿ ಇದ್ದಾಗ ಪೋಲಿಸರು ಬಂದು ನಮ್ಮನ್ನು ಮುರುಗೋಡು ಪೋಲೀಸ್ ಠಾಣೆಗೆ ಕರೆತಂದರು. ಆರೋಪಿಯು ಚಿಂಚನೂರಿನಲ್ಲಿದಾಗ ನನಗೆ ಏನು ಮಾಡಿರಲಿಲ್ಲ. ಪೋಲೀಸ್ ಠಾಣೆಯಲ್ಲಿ ಪೋಲಿಸರು ನನ್ನನ್ನು ವಿಚಾರಿಸಿದಾಗ ನಾನು ಈ ಘಟನೆಯ ಎಲ್ಲಾ ವಿಚಾರವನ್ನು ಹೇಳಿದ್ದೆ. ದಿನಾಂಕ:14.04.2016 ರಂದು ಪೋಲೀಸರು ನನ್ನನ್ನು ವೈದ್ಯಕೀಯ ಪರೀಕ್ಷೆಗಾಗಿ ಕರೆತಂದರು. ವೈದ್ಯಕೀಯ ಪರೀಕ್ಷೆ ಮುಗಿದ ನಂತರ ಪೋಲೀಸರು ನನ್ನನ್ನು ಬೆಳಗಾವಿಯ ರಿಮಾಂಡ್‌ರೂಮಿಗೆ ಕರೆದುಕೊಂಡು ಬಿಟ್ಟಿದ್ದರು. ಆ ಬಳಿಕ ದಿನಾಂಕ:21.04.2016 ರಂದು ಪೋಲೀಸರು ನನ್ನನ್ನು ಸವದತ್ತಿ ನ್ಯಾಯಾಲಯಕ್ಕೆ ಕರೆದುಕೊಂಡು ಹೋಗಿದ್ದರು. ಸವದತ್ತಿ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯನ್ನು ದಾಖಲು ಮಾಡಲಾಗಿದ್ದು ಆ ಹೇಳಿಕೆಯನ್ನು ನಿಪಿ–2 ಮತ್ತು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ–2ಎ ಎಂದು ಗುರುತಿಸಲಾಗಿದೆ.

ದಿನಾಂಕ:22.04.2016ರಂದು ಪೋಲೀಸರು ನನ್ನನ್ನು ಪಂಚನಾಮೆ ಮಾಡುವ ಸಲುವಾಗಿ ತಡಸಲೂರಿನ ನಮ್ಮ ಮನೆಗೆ ಮತ್ತು ಆರೋಪಿಯ ಮನೆಗೆ ಕರೆದುಕೊಂಡು ಹೋಗಿದ್ದರು ಮತ್ತು ಪಂಚನಾಮೆಯನ್ನು ಮಾಡಿದ್ದರು ಮತ್ತು ಪೋಟೊವನ್ನು ತೆಗೆದಿದ್ದರು. ಆಗ ಮಾಡಿರುವ ನಿಪಿ–3 ಪಂಚನಾಮೆಗೆ ನನ್ನ ಸಹಿ ಇದ್ದು ಮತ್ತು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ–3ಎ ಎಂದು ಗುರುತಿಸಲಾಗಿದೆ. ಆ ಪಂಚನಾಮೆಯ ಕಾಲಕ್ಕೆ ತೆಗೆದ ಪೋಟೊದಲ್ಲಿ ನಾನು ಇರುತ್ತೇನೆ. ಆ ಪೋಟೊವನ್ನು ನಿಪಿ–4 ಎಂದು ಗುರುತಿಸಲಾಗಿದೆ.

Teachingninja.in

**5. Translate the following document to English language:**

**Marks: 20**

ಈ ಕೆಳಕಂಡ ದಸ್ತಾವೇಜನ್ನು ಆಂಗ್ಲ ಭಾಷೆಗೆ ಅನುವಾದಿಸಿ:

ಅಂಕಗಳು: 20

## ವ್ಯವಸ್ಥಾ ಪತ್ರ

ದಿನಾಂಕ 24.09.2018ರಂದು ಹಾಸನ ಜಿಲ್ಲೆ ಚನ್ನರಾಯಪಟ್ಟಣ ತಾಲೂಕು ಹೊಸೂರು ಗ್ರಾಮದಲ್ಲಿ ವಾಸವಾಗಿರುವ ದಿವಂಗತ ಶ್ರೀ ರಾಜೇಗೌಡರ ಮಗ ಸುಮಾರು 69 ವರ್ಷ ಪ್ರಾಯದ ಬೋರೇಗೌಡನಾದ ನಾನು

ಹಾಸನ ಜಿಲ್ಲೆ ಚನ್ನರಾಯಪಟ್ಟಣ ತಾಲೂಕು ಹೊಸೂರು ಗ್ರಾಮದಲ್ಲಿ ವಾಸವಾಗಿರುವ ನನ್ನ ಮಗ ಸುಮಾರು 42 ವರ್ಷ ಪ್ರಾಯದ ಶ್ರೀ ಬಿ.ವೆಂಕಟೇಶ ಆದ ನಿನಗೆ ಬರೆದುಕೊಟ್ಟ ಸ್ಥಿರಾಸ್ತಿಯ ವ್ಯವಸ್ಥಾ ಪತ್ರ ಏನೆಂದರೆ:

ಈ ಕೆಳಗೆ ಶೆಡ್ಯೂಲ್‌ನಲ್ಲಿ ವಿವರಿಸಿದ ಸ್ಥಿರಾಸ್ತಿಯು ಮೂಲತಃ ನನ್ನ ತಂದೆ ಶ್ರೀ ರಾಜೇಗೌಡರಿಗೆ ಚನ್ನರಾಯಪಟ್ಟಣ ಭೂನ್ಯಾಯ ಮಂಡಳಿಯ ಪ್ರಕರಣ ಸಂಖ್ಯೆ: ಟಿ.ಆರ್.ಎಲ್.634/1980–81 ನೇ ಪ್ರಕರಣದಲ್ಲಿ ಅನುಭೋಗದಾರನೆಂದು ತೀರ್ಮಾನಿಸಿ ಚನ್ನರಾಯಪಟ್ಟಣ ಭೂ ಸುಧಾರಣ ವಿಶೇಷ ತಹಶಿಲ್ದಾರವರು ದಿನಾಂಕ 26.02.1989 ರಂದು ಫಾರಂ ನಂ.10 ರಲ್ಲಿ ಪ್ರಮಾಣ ಪತ್ರವನ್ನು ನೀಡಿದ ಆಸ್ತಿಯಾಗಿರುತ್ತದೆ. ಆ ಪ್ರಕಾರ ನನ್ನ ತಂದೆ ರಾಜೇಗೌಡರು ತನ್ನ ಹೆಸರಿನಲ್ಲಿ ಆ ಆಸ್ತಿಯ ಖಾತೆಯನ್ನು ಬದಲಾಯಿಸಿ ಸ್ವಾಧೀನಗಾರರಾಗಿ ಸಂಪೂರ್ಣ ಇಚ್ಛಾನುಸಾರದ ಹಕ್ಕು ಹೊಂದಿ ಅನುಭವಿಸಿಕೊಂಡು ಬರುತ್ತಿದ್ದರು. ನನ್ನ ತಂದೆ ರಾಜೇಗೌಡರು ದಿನಾಂಕ 23.07.1998 ರಂದು ಮೃತಪಟ್ಟಿದ್ದು ಅವರು ದಿನಾಂಕ 04.09.1995ರಂದು ಬರೆದಂತ ನೊಂದಾಯಿತ ಉಯಿಲು ನಾಮೆಯ ಪ್ರಕಾರ ಆ ಆಸ್ತಿಯು ನನ್ನ ಪಾಲಿಗೆ ಬಂದು ನಾನು ನನ್ನ ಹೆಸರಲ್ಲಿ ಖಾತ ಬದಲಾವಣೆಯನ್ನು ಮಾಡಿ ಸಂಪೂರ್ಣ ಇಚ್ಛಾನುಸಾರ ಅನುಭವಿಸಿಕೊಂಡು ಬರುತ್ತಿದ್ದು, ಷೆಡ್ಯೂಲ್ ಸ್ವತ್ತಿನ ಮೇಲೆ ನನಗೆ ಸಂಪೂರ್ಣವಾದ ಹಕ್ಕು ಇದ್ದು ನನ್ನ ಹೊರತು ಬೇರೆ ಯಾರಿಗೂ ಕೂಡ ಈ ಸ್ವತ್ತಿನ ಮೇಲೆ ಯಾವುದೇ ರೀತಿಯ ಹಕ್ಕು ಯಾ ಅಧಿಕಾರ ಇರುವುದಿಲ್ಲ. ನಾನು ಈ ವ್ಯವಸ್ಥಾ ಪತ್ರವನ್ನು ಬರೆದುಕೊಡಲು ಸಂಪೂರ್ಣ ಅಧಿಕಾರವುಳ್ಳವನಾಗಿರುತ್ತೇನೆ.

Teachingninja.in

ನನ್ನ ಮಗನಾದ ನೀನು ನನ್ನನ್ನು ಅವಲಂಬಿತನಾಗಿದ್ದು ನಿನ್ನ ಮೇಲೆ ನನಗೆ ಇರುವ ಪ್ರೀತಿ ವಾತ್ಸಲ್ಯದ ಜೋತಕವಾಗಿ ಷೆಡ್ಯೂಲ್ ಸ್ವತ್ತಿಗೆ ನಿನ್ನನ್ನು ಹಕ್ಕುದಾರನಾಗಿ ಮಾಡಬೇಕು ಎಂಬುದು ನನ್ನ ದೃಢ ಸಂಕಲ್ಪವಾಗಿದೆ.

ಅದರಂತೆ ಈ ವ್ಯವಸ್ಥಾ ಪತ್ರದ ಮೂಲಕ ನಿನಗೆ ಷೆಡ್ಯೂಲ್ ಸ್ವತ್ತಿಗೆ ಸಂಪೂರ್ಣ ಹಕ್ಕು ಸ್ಥಾಪಿಸಿ ಅದರ ಖುದ್ದು ಸ್ವಾಧೀನ ವಾ ಅನುಭೋಗವನ್ನು ನಿನಗೆ ಒಪ್ಪಿಸಿ ಬಿಟ್ಟುಕೊಟ್ಟಿದ್ದು ಸದರಿ ಸ್ಥಿರಾಸ್ತಿಗೆ ನೀನೆ ಸಂಪೂರ್ಣ ಹಕ್ಕುದಾರನಾಗಿ ಅದರ ಖಾತಾ ವಾ ಪಹಣಿ ಪತ್ರ ಮತ್ತು ಕಂದಾಯ ದಾಖಲೆಗಳನ್ನು ನಿನ್ನ ಹೆಸರಿನಲ್ಲಿ ಬದಲಾಯಿಸಿಕೊಂಡು ಸಂಪೂರ್ಣ ಇಚ್ಛಾನುಸಾರದ ಹಕ್ಕಿನಿಂದ ಅನುಭವಿಸಿಕೊಂಡು ಸದರಿ ಸ್ಥಿರಾಸ್ತಿಯನ್ನು ವಿನಿಯೋಜಿಸಲು ಅಥವಾ ಪರಾಧೀನ ಮಾಡಲು ಸಂಪೂರ್ಣ ಹಕ್ಕುದಾರನಾಗಿರುತ್ತಿ.

ನಾನು ನನ್ನ ಸಂಪೂರ್ಣ ಒಪ್ಪಿಗೆಯಿಂದಲೆ ನಿನಗೆ ಈ ವ್ಯವಸ್ಥಾ ಪತ್ರವನ್ನು ಬರೆದುಕೊಟ್ಟಿರುವುದರಿಂದ ಇದನ್ನು ಯಾವ ಕಾರಣದಿಂದಲೂ ತಿದ್ದುಪಡಿ ಯಾ ರದ್ದು ಪಡಿಸುವ ಹಕ್ಕು ನನಗೆ ಇರುವುದಿಲ್ಲ ಎಂದು ನಾನು ಸ್ವ-ಇಚ್ಛೆಯಿಂದ ಬರೆದುಕೊಟ್ಟ ವ್ಯವಸ್ಥಾ ಪತ್ರ.

## ಷೆಡ್ಯೂಲ್

ಹಾಸನ ಜಿಲ್ಲೆ ಚನ್ನರಾಯಪಟ್ಟಣ ತಾಲೂಕು ಹೊಸುರು ಗ್ರಾಮದ ಸರ್ವೆ ನಂ.195/8 ರಲ್ಲಿನ 3 ಎಕರೆ 40 ಗುಂಟೆ ಜಮೀನು.

| | |
|---|---|
| ಪೂರ್ವಕ್ಕೆ: | ಸರ್ವೆ ನಂ.194 ರಲ್ಲಿ ಜವರೇಗೌಡರ ಜಮೀನು |
| ಪಶ್ಚಿಮಕ್ಕೆ : | ಸರ್ಕಾರಿ ರಸ್ತೆ |
| ಉತ್ತರಕ್ಕೆ : | ಸರ್ವೆ ನಂ.196 ರಲ್ಲಿ ವೆಂಕಟಸ್ವಾಮಿಯವರ ಜಮೀನು |
| ದಕ್ಷಿಣಕ್ಕೆ : | ಸರ್ವೆ ನಂ.193 ರಲ್ಲಿ ಕೃಷ್ಣಪ್ಪನವರ ಮನೆ ಮತ್ತು ಬಾವಿ |

ಈ ಮೇಲ್ಕಾಣಿಸಿದ ಸ್ಥಿರಾಸ್ತಿ ಮತ್ತು ಇದರಲ್ಲಿರುವ ಹಳೆಯ ಮನೆ ಮತ್ತು ಬಾವಿ ಮತ್ತು ಇದಕ್ಕೊಪಿದ ಮಾಮೂಲು ದಾರಿ ಹಕ್ಕು, ನೀರಿನ ಹಕ್ಕು ಮತ್ತು ಅನುಭೋಗದ ಹಕ್ಕು.

Teachingninja.in

6. **Translate the following passage as extracted from a judgment to English language:** Marks :15

**ಈ ಕೆಳಕಂಡ ತೀರ್ಪಿನ ಭಾಗವನ್ನು ಆಂಗ್ಲ ಭಾಷೆಗೆ ಅನುವಾದಿಸಿ:** ಅಂಕಗಳು: 15

12. ಸರ್ವೋಚ್ಚ ನ್ಯಾಯಾಲಯದ ಮೇಲಿನ ಉಲ್ಲೇಖಿತ ತೀರ್ಪುಗಳಲ್ಲಿರುವ ತತ್ವಗಳನ್ನು ಗಮನದಲ್ಲಿಟ್ಟುಕೊಂಡು ಮುಂದಿರುವ ಸಂಗತಿಗಳನ್ನು ಅವಲೋಕಿಸಿದಾಗ ವಾದಿಯು ತಾನು ಪ್ರತಿವಾದಿ 1 ಮತ್ತು 2ರ ನಡುವಿನ ವಿವಾಹಬಂಧನದಿಂದ ಹುಟ್ಟಿರುತ್ತೇನೆ ಎಂದು ಪ್ರತಿಪಾದಿಸುವುದನ್ನು ಹೊರತು ಪಡಿಸಿ ತನ್ನ ಸಾಧನೆಯನ್ನು ಮೇಲ್ನೋಟಕ್ಕೆ ಸಾಬೀತು ಪಡಿಸಲು ಇತರ ದಾಖಲೆಯನ್ನು ಹಾಜರು ಪಡಿಸಿರುವುದಿಲ್ಲ. ಈ ಹಂತದಲ್ಲಿ, ಎದುರುದಾರನ ಪರವಾಗಿ ಹಾಜರಾಗಿರುವ ಮಾನ್ಯ ವಕೀಲರು, ವಾದಿಯು ವ್ಯಾಸಂಗ ಮಾಡುತ್ತಿದ್ದ ಶಾಲೆ/ಪ್ರಾಧಿಕಾರಗಳು ಕೊಟ್ಟ ವರ್ಗಾವಣೆ ಪತ್ರ ಮತ್ತು ಪ್ರತಿವಾದಿ 1 ಮತ್ತು 2ರ ನಡುವೆ ವಿವಾಹ ನೆರವೇರಿದೆ ಎಂದು ಹೇಳುವ ಸಮಯದಲ್ಲಿ ಗ್ರಾಮ ಮಟ್ಟದಲ್ಲಿ ಪಡೆಯಲಾಗಿದೆಯೆಂದು ಹೇಳಲಾಗಿರುವ ಗ್ರಾಮಸ್ಥರು ನೀಡಿದ ಹೇಳಿಕೆಗಳಿರುವ ನಿಶಾನೆ ಪಿ–8 ಮತ್ತು ಪಿ–9ನ್ನು ಲಭ್ಯ ಮಾಡಿರುತ್ತಾರೆ. ಲಭ್ಯ ಮಾಡಿದ ನಿಶಾನೆ ಪಿ–8ನ್ನು ಈ ನ್ಯಾಯಾಲಯವು ಅವಲೋಕಿಸಿದ್ದು, ಅರ್ಜಿದಾರರ ಪರವಾಗಿ ಹಾಜರಾಗಿರುವ ಮಾನ್ಯ ವಕೀಲರು ಸರಿಯಾಗಿ ತೋರಿಸಿದಂತೆ ಅರ್ಜಿದಾರನ ತಂದೆಯ ಹೆಸರಿಗೆ ಸಂಬಂಧಪಟ್ಟ ಅಂಕಣದಲ್ಲಿ 'ರಾಜು ನಾಯ್ಕ' ಎಂದು ಕಾಣಿಸಲಾಗಿದೆ. ಅದು ಮೇಲ್ನೋಟಕ್ಕೆ ಮೂಲ ಹೆಸರನ್ನು ಹೊಡೆದುಹಾಕಿ ನಂತರ ಸದರಿ ನಮೂದು ಮಾಡಿರುವುದನ್ನು ಸೂಚಿಸುತ್ತದೆ. ಇದು ಛಾಯಾಪ್ರತಿ ಆಗಿರುವುದರಿಂದ ಬದಲಾವಣೆಯಾಗಿದೆಯೆಂದು, ಮಾರ್ಪಾಟಾಗಿದೆಯೆಂದು ಅಥವಾ ಪರಿವರ್ತಿಸಲಾಗಿದೆಯೆಂದು ನಿರ್ಣಾಯಕವಾಗಿ ಅಭಿಪ್ರಾಯ ಪಡಲು ಸಾಧ್ಯವಾಗುವುದಿಲ್ಲ. ಈ ನ್ಯಾಯಾಲಯವು ಸದರಿ ದಸ್ತಾವೇಜನ್ನು ಪರಿವರ್ತಿಸಿರುವುದರ ಅಥವಾ ಮಾರ್ಪಾಟು ಮಾಡಿರುವುದರ ಸಂಬಂಧವಾಗಲಿ ಯಾವುದೇ ಅಭಿಪ್ರಾಯವನ್ನು ವ್ಯಕ್ತಪಡಿಸಿಲ್ಲ ಮತ್ತು ಈ ವಿವಾದವನ್ನು ಅಧಿವಿಚಾರಣಾ ನ್ಯಾಯಾಲಯವು ತೀರ್ಮಾನಿಸಬೇಕಾಗಿರುವುದರಿಂದ ಈ ನ್ಯಾಯಾಲಯ ಯಾವುದೇ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಲ್ಲಿ ಅದು ಉಭಯ ಪಕ್ಷಗಾರರ ಹಕ್ಕುಗಳಿಗೆ ಪೂರ್ವಾಗ್ರಹ ಉಂಟುಮಾಡುವ ಸಾಧ್ಯತೆ ಇರುತ್ತದೆ. ಇಲ್ಲಿ ಮೇಲೆ ಈ ನ್ಯಾಯಾಲಯವು ವ್ಯಕ್ತಪಡಿಸಿದ ಅಭಿಪ್ರಾಯ ಯಾವುದೇ ವಿವಾದವಿಲ್ಲದ ಸಮಯದಲ್ಲಿ ಮೊದಲನೇ ಪ್ರತಿವಾದಿಯು ವಾದಿಯ ತಂದೆಯಾಗಿ ಯಾವಾಗಲೂ ಗುರುತಿಸಿಕೊಂಡಿರುವುದನ್ನು ವಾದಿಯು ಮೇಲ್ನೋಟಕ್ಕೆ ತೋರಿಸಿಕೊಟ್ಟಿದ್ದಾನೆಯೇ ಎಂಬುದನ್ನು ಖಚಿತಪಡಿಸುವ ಬಗೆಗಿನ ಉದ್ದೇಶಕ್ಕೆ ಸೀಮಿತಗೊಳಿಸಿರುವುದಕ್ಕೆ

Teachingninja.in

ಸಂಬಂಧಪಟ್ಟಿರುತ್ತದೆಯೆಂಬುದು ಸ್ಪಷ್ಟವಾಗುತ್ತದೆ. ಈ ಒಂದು ದಸ್ತಾವೇಜನ್ನು ಓದುವ ಮೂಲಕ ಈ ಹಂತದಲ್ಲಿ ಪ್ರಶ್ನಿತ ಆದೇಶವನ್ನು ಪರಿಶೀಲಿಸುವ ಸೀಮಿತ ಉದ್ದೇಶಕ್ಕಾಗಿ ತೆಗೆದುಕೊಳ್ಳಬಹುದಾದ ನಿರ್ಣಯ ಮಾತ್ರ ಎಂದರೆ, ಅದು ಈ ರೀತಿ ಆಗುವುದಿಲ್ಲ. ಅಲ್ಲದೆ, ಗ್ರಾಮಸ್ಥರು ಕೊಟ್ಟಿರುವರೆಂದು ಹೇಳಲಾದ ಮತ್ತು ಪ್ರತಿವಾದಿ 1 ಮತ್ತು 2ರ ನಡುವೆ ವಿವಾಹವಾಗಿದೆ ಎಂದು ಸಾಕ್ಷ್ಯಕ್ಕೆ ದಾಖಲಿಸಲಾದ ನಿಶಾನೆ ಪಿ.9 ಹೇಳಿಕೆಯನ್ನು ಈ ನ್ಯಾಯಾಲಯವು ನಿಶಾನೆ ಪಿ.8ಕ್ಕೆ ನೀಡಲಾದಂಥಹ ಕಾರಣಕ್ಕಾಗಿಯೇ ತಿರಸ್ಕರಿಸಲ್ಪಡುತ್ತದೆ.

13. ವಿಷಯದ ಆ ದೃಷ್ಟಿಯಿಂದ, ಅಧಿವಿಚಾರಣಾ ನ್ಯಾಯಾಲಯವು ಅರ್ಜಿಯನ್ನು ಮಂಜೂರು ಮಾಡಿರುವುದು ಮತ್ತು ರಕ್ತದ ಮಾದರಿಯನ್ನು ನೀಡಲು ಮತ್ತು ಡಿ.ಎನ್.ಎ. ಪರೀಕ್ಷೆಗೆ ಒಳಗಾಗಲು ಮೊದಲ ಎದುರುದಾರನಿಗೆ ನಿರ್ದೇಶಿಸಿರುವುದು ಸಮರ್ಥನೀಯವಲ್ಲವೆಂದು ಈ ನ್ಯಾಯಾಲಯವು ಅಭಿಪ್ರಾಯಪಡುತ್ತದೆ.

*******

Teachingninja.in